3. 1997-98ನೇ ಸಾಲಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

VI. ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) : ಶ್ರೀ ಬಿ.ಎ. ಮೊಯಿದ್ದೀನ್ (ಉನ್ನತ ಶಿಕ್ಷಣ ಮಂತ್ರಿ) ರವರ ಪರವಾಗಿ

ಅಧ್ಯಕ್ಷರೇ, 1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ 45(2)ನೇ ಪ್ರಕರಣದ ಮೇರೆಗೆ;

1. 1997-98ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾನಿಲಯದ 33ನೇ ವಾರ್ಷಿಕ ವರದಿ
2. 1997-98ನೇ ಸಾಲಿನ ಮಂಗಳೂರು ವಿಶ್ವವಿದ್ಯಾಲಯದ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

ಅರ್ಜಿಗಳನ್ನೊಪಿಸುವುದು

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಸಭಾಧ್ಯಕ್ಷರೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಹೆಚ್. ಸಂಜೀವಶೆಟ್ಟಿಯವರನ್ನು ಪ್ರಥಮ ದರ್ಜೆಯ ಸಹಾಯಕ ಹುದ್ದೆಗೆ ಪುನರ್ ನೇಮಕಗೊಳಿಸುವ ಬಗ್ಗೆ ಅರ್ಜಿಯನ್ನು ಒಪ್ಪಿಸುತ್ತಿದ್ದೇನೆ.

(ಶ್ರೀ ಡಿ.ಕೆ. ಶಿವಕುಮಾರ್ (ಕನಕಪುರ) : ಮಾನ್ಯ ಸದಸ್ಯರು ಗೈರುಹಾಜರಿದ್ದರು)

ಶ್ರೀ ಯು.ಬಿ. ಬಣಕಾರ್ (ಹಿರೆಕೆರೂರ್) : ಮಾನ್ಯ ಸಭಾಧ್ಯಕ್ಷರೆ, ಶ್ರೀ ಜೆ.ಎಸ್. ಶಿರೋಳ, ನಿವೃತ್ತ ಶಿಕ್ಷಕರು, ಇವರಿಗೆ ಸ್ಥಗಿತ ವೇತನ ಬಡ್ತಿಗಳನ್ನು ನೀಡುವ ಬಗ್ಗೆ ಅರ್ಜಿಯನ್ನು ಒಪ್ಪಿಸುತ್ತಿದ್ದೇನೆ.

ವರದಿಗಳನ್ನೊಪ್ಪಿಸುವುದು

ಶ್ರೀ ಧರಮ್ ಸಿಂಗ್ (ಜೇವರ್ಗಿ) : ಮಾನ್ಯ ಅಧ್ಯಕ್ಷರೆ, ನಾನು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ 39, 40, 41, 42, 43, ಮತ್ತು 44ನೇ ವರದಿಗಳನ್ನು ಈ ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.

12.00 ಪಿ.ಎಂ.

ಅಧ್ಯಕ್ಷರು : ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಬೇಡಿಕೆಗಳ ಮೇಲೆ ಮಾತನಾಡಬೇಕಾಗಿದೆ.

ಶ್ರೀ ವಾಟಾಳ್ ನಾಗಾರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಅದಕ್ಕೂ ಮುಂಚೆ ಒಂದು ವಿಷಯ ಹೇಳುತ್ತೇನೆ. ನಾವು ಎಲ್ಲಾ ಕಡೆಯಿಂದ ಸಂಗ್ರಹ ಮಾಡಿರುವ ಕಾರ್ಗಿಲ್ ಪರಿಹಾರ ನಿಧಿಯನ್ನು ಇನ್ನು ಐದು ನಿಮಿಷದಲ್ಲಿ ನಾನು ತಮಗೆ ಅರ್ಪಿಸುತ್ತೇನೆ. ತಾವು ಅಲ್ಲಿಗೆ ಬರಬೇಕು. ಈಗ ನಮ್ಮ ಪಕ್ಷದ ಪರವಾಗಿ ನಾನು ಸ್ವತಃ 10 ಸಾವಿರ ರೂಪಾಯಿಗಳ ಚೆಕ್ ಅನ್ನು ನಿಮಗೆ ಇಲ್ಲಿ ಕೊಡುತ್ತಿದ್ದೇನೆ.